## ನಿಮ್ಮೊಡನೆ

# ಅಂತರ್ಜಾಲ ಮತ್ತು ಅಪರಾಧ ಜಗತ್ತು

ಲೈಂಗಿಕ ದೌರ್ಜನ್ಯ ಪ್ರಕರಣಗಳಿಂದ ಪುಟ್ಟ ಕಂದಮ್ಮಗಳೂ ಮುಕ್ತರಾಗಿಲ್ಲ. ಅಂತಹ ಅಸುರಕ್ಷಿತ ವಾತಾವರಣ ನಮ್ಮ ಸಮಾಜದಲ್ಲಿದೆ. ಮನೆ, ಶಾಲೆಗಳಂತಹ ಸುರಕ್ಷಿತ ಎಂಬ ತಾಣಗಳಲ್ಲೂ ಬಂಧುಗಳು ಅಥವಾ ಪರಿಚಿತರಿಂದಲೇ ಲೈಂಗಿಕ ಶೋಷಣೆಗೆ ಮಕ್ಕಳು ಗುರಿಯಾಗಬಹುದು ಎಂಬುದನ್ನು ಸಮೀಕ್ಷೆಗಳು ಎತ್ತಿ ಹೇಳಿವೆ. ಇದಕ್ಕೆ ಪೂರಕ ಎಂಬಂತೆ ಎಲ್‌ಕೆಜಿ ಓದುತ್ತಿರುವ ಪುಟ್ಟ ಬಾಲಕಿಯ ಮೇಲಿನ ಅತ್ಯಾಚಾರ ಪ್ರಕರಣ  ನೆಲಮಂಗಲದಿಂದ ಇತ್ತೀಚೆಗೆ ವರದಿಯಾಗಿದೆ. ಈ ಪ್ರಕರಣ ಮತ್ತೂ ಭೀಕರ. ಏಕೆಂದರೆ ಅತ್ಯಾಚಾರ ನಡೆಸಿದಾತ ಅದೇ ಶಾಲೆಯಲ್ಲಿ 9ನೇ ತರಗತಿ ಓದುತ್ತಿದ್ದ ಬಾಲಕ. ಜೊತೆಗೆ ಬಾಲಕಿಯ ಪಕ್ಕದ ಮನೆಯ ಹುಡುಗ. ಇಷ್ಟು ಸಣ್ಣ ವಯಸ್ಸಿನಲ್ಲೇ ಅತ್ಯಾಚಾರದಂತಹ ಘೋರ ಅಪರಾಧ ಎಸಗುವಂತಹ ಪ್ರೇರಣೆಯನ್ನು ಈ ಹದಿಹರೆಯದ ಹುಡುಗ ಪಡೆದದ್ದಾದರೂ ಹೇಗೆ?

ಮಾಧ್ಯಮಗಳ ವರದಿಗಳ ಪ್ರಕಾರ, ಆತ ತನ್ನ ಮೊಬೈಲ್‌ನಲ್ಲಿದ್ದ ಅಂತರ್ಜಾಲದಲ್ಲಿ ಅಶ್ಲೀಲ ದೃಶ್ಯಗಳನ್ನು ವೀಕ್ಷಿಸುತ್ತಿದ್ದ. ಅವುಗಳ ಪ್ರಭಾವವೇ ಈ ವಿಕೃತಿಯ ಕೃತ್ಯಕ್ಕೆ ಕಾರಣ ಎಂದು ಆರಂಭದ ತನಿಖೆಗಳು ಹೇಳಿರುವುದಾಗಿ ವರದಿಗಳು ಹೇಳಿವೆ. ಇದು ಸಹಜವಾಗಿಯೇ ಆತಂಕ ಸೃಷ್ಟಿಸುವ ಸಂಗತಿ. ಸುಖಜೀವನದ ಸೌಕರ್ಯ ಸಾಧನಗಳು ಅಪರಾಧಗಳ ಮೂಲವಾಗುವಂತಹ ವಿಪರ್ಯಾಸ ಇದು.

ತಂತ್ರಜ್ಞಾನದಿಂದ ಸಾಧ್ಯವಾಗಿರುವ ಸುಖಜೀವನದ ಸೌಕರ್ಯ ಸಾಧನಗಳೇ ಅಪರಾಧಗಳ ಮೂಲವಾಗುವಂತಹ ವಿಪರ್ಯಾಸಗಳನ್ನು ನಾವಿಂದು ಕಾಣುತ್ತಿದ್ದೇವೆ.

ಹದಿಹರೆಯದವರ ಲೈಂಗಿಕ ಅಪರಾಧಗಳು ಅಥವಾ ಲೈಂಗಿಕ ಸಾಹಸಗಳು ಆತಂಕ ತರುವಂತಹ ಸಂಗತಿ. ಈ ಬಗೆಯ ಇನ್ನೆಷ್ಟೋ ಲೈಂಗಿಕ ಹುಚ್ಚಾಟಗಳು ಬಹುಶಃ ವರದಿಯಾಗದೇ ಇರಬಹುದು. ಹದಿಹರೆಯದವರ ಲೈಂಗಿಕ  ಅಪರಾಧ ಕೃತ್ಯಗಳು ರಾತ್ರೋರಾತ್ರಿ ಸೃಷ್ಟಿಯಾದುದಲ್ಲ ಎಂಬುದನ್ನಂತೂ ಮೊದಲು ನಾವು ಗಮನಿಸಬೇಕಿದೆ. ಇದು ಕಳೆದ ಹಲವಾರು ವರ್ಷಗಳಿಂದ ಬೆಳೆಯುತ್ತಿರುವಂತಹ ಪ್ರಮುಖ ಸಾಮಾಜಿಕ ಸಮಸ್ಯೆ ಎಂಬುದನ್ನೂ ಅರಿತುಕೊಳ್ಳಬೇಕಿದೆ. ಇದಕ್ಕೆ ಮುಖ್ಯ ಕಾರಣ ಇಂದಿನ ಸಂಪರ್ಕ ಕ್ರಾಂತಿ. ಸಾವಿರಾರು ಅಶ್ಲೀಲ ವೆಬ್‌ತಾಣಗಳ ಸಂಪರ್ಕ ಇಂದಿನ ಹದಿಹರೆಯದ ಮಕ್ಕಳಿಗೆ ಕಷ್ಟವೇನಲ್ಲ. ಜೊತೆಗೆ ದಿನನಿತ್ಯ ಎಂಬಂತೆ ಲೈಂಗಿಕ ದೌರ್ಜನ್ಯದ ಕಥೆಗಳನ್ನು ಮಾಧ್ಯಮಗಳಲ್ಲಿ ಮಕ್ಕಳು ಓದುತ್ತಿರುತ್ತಾರೆ ಅಥವಾ ವೀಕ್ಷಿಸುತ್ತಿರುತ್ತಾರೆ. ಇಷ್ಟೆಲ್ಲದರ ಮೇಲೆ ಲೈಂಗಿಕ ಕಾಮನೆಗಳನ್ನು ಕೆರಳಿಸುವಂತಹ 'ರಿಯಾಲಿಟಿ ಷೋ' ಹೆಸರಲ್ಲಿ ನಡೆಸುವ ಕಸರತ್ತುಗಳು; ವಿದೇಶಿ ಚಾನೆಲ್‌ಗಳ ಮಧ್ಯರಾತ್ರಿ ಚಿತ್ರಗಳು. ಸುತ್ತಲಿನ ಈ ಪ್ರಭಾವಗಳು ಮಕ್ಕಳಲ್ಲಿ ಬೀರಬಹುದಾದ ಅನಾರೋಗ್ಯಕರ ಕುತೂಹಲಗಳು, ನಿಜಜೀವನದ ದುರಂತಗಳಿಗೆ ಅನೇಕ ಸಂದರ್ಭಗಳಲ್ಲಿ ಕಾರಣವಾಗುತ್ತಿರುವುದು ಹೆಚ್ಚಾಗುತ್ತಿದೆ. ವರದಿಯೊಂದರ ಪ್ರಕಾರ, ಅಂತರ್ಜಾಲದ ತಾಣಗಳಿಂದ ಡೌನ್‌ಲೋಡ್ ಮಾಡಿದ ಅಶ್ಲೀಲಚಿತ್ರ (ಪೋರ್ನೊಗ್ರಫಿ)ಗಳ ಸಿಡಿಗಳನ್ನು ಮಾರಾಟ ಮಾಡಿ ಹದಿಹರೆಯದ ಹುಡುಗನೊಬ್ಬ ದುಡ್ಡು ಮಾಡುತ್ತಿದ್ದದ್ದೂ ಇದೆ.

ಹೆಚ್ಚಿನ ಸಂದರ್ಭಗಳಲ್ಲಿ ದೊಡ್ಡ ಪಾತಕಿ ಆಗಿರುವುದು ಮೊಬೈಲ್ ಫೋನ್. 'ಎಂಟನೇ ತರಗತಿ ಓದುವ ಮಕ್ಕಳೂ ಅಶ್ಲೀಲ ಚಿತ್ರಗಳಿರುವ ಮೆಮೊರಿ ಕಾರ್ಡ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಗುಂಪುಗಳಲ್ಲಿ ಲೈಂಗಿಕ ಚಿತ್ರಗಳನ್ನು ವೀಕ್ಷಿಸಿ ಚರ್ಚಿಸುವುದೂ ಇದೆ' ಎನ್ನುತ್ತಾರೆ ಮಕ್ಕಳಲ್ಲಿನ ಈ ಪ್ರವೃತ್ತಿಯನ್ನು ಅಧ್ಯಯನ ಮಾಡಿ ಆಪ್ತಸಲಹೆ ನೀಡುತ್ತಿರುವ ತಜ್ಞರು. ಇನ್ನೂ ಕೆಟ್ಟದ್ದೆಂದರೆ ಮೊಬೈಲ್ ಫೋನ್ ಕ್ಯಾಮೆರಾಗಳನ್ನು ಬಳಸಿ ಲೈಂಗಿಕ ದೃಶ್ಯಗಳನ್ನು ಚಿತ್ರೀಕರಿಸಿ ಹಂಚಿಕೊಳ್ಳುವ ಪ್ರಕ್ರಿಯೆ. ಇದಕ್ಕೆ ನೆರವಾಗುವ ಬ್ಲೂಟೂಥ್ ತಂತ್ರಜ್ಞಾನದ ಬಗ್ಗೆ ಅನೇಕ ತಂದೆತಾಯಿಗಳಿಗೂ ಅರಿವಿಲ್ಲದಿರುವುದು ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣವಾಗಿಸುತ್ತಿದೆ. ಶಾಲಾ ಮಕ್ಕಳು ಲೈಂಗಿಕ ದೃಶ್ಯಗಳ ರವಾನೆಗೆ ಎಂಎಂಎಸ್ ( ಮಲ್ಟಿಮೀಡಿಯಾ ಮೆಸೇಜಿಂಗ್ ಸರ್ವೀಸ್– ಬಹುಮಾಧ್ಯಮ ಸಂದೇಶ ಸೇವೆ) ದುರುಪಯೋಗ ಪಡಿಸಿಕೊಂಡಂತಹ ಅನೇಕ ಹಗರಣಗಳು ಈಗಾಗಲೇ ವರದಿಯಾಗಿವೆ.

ಬಾಲ್ಯದಿಂದ ಹದಿಹರೆಯಕ್ಕೆ ಹೊರಳಿಕೊಳ್ಳುವ ದೈಹಿಕ ಬದಲಾವಣೆಗಳ ಸಂದರ್ಭದಲ್ಲಿ ಲೈಂಗಿಕ ವಿಚಾರಗಳು ಹಾಗೂ ಚಿತ್ರಗಳು ಮಕ್ಕಳನ್ನು ಕೆರಳಿಸುತ್ತವೆ. ಲೈಂಗಿಕ ಅಪರಾಧಗಳನ್ನು ಎಸಗುವ ಮಕ್ಕಳಿಗೆ ತಾವೇನು ಮಾಡುತ್ತಿದ್ದೇವೆಂಬ ಅರಿವೂ ಅನೇಕ ಬಾರಿ ಇರುವುದಿಲ್ಲ ಎಂದೂ ತಜ್ಞರು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿಯೇ ಆರೋಗ್ಯಕರವಾದ, ಅರ್ಥಪೂರ್ಣವಾದ ಹಾಗೂ ಅನಗತ್ಯ ಕುತೂಹಲಗಳನ್ನು ಕೆರಳಿಸದಂತಹ ಲೈಂಗಿಕ ಶಿಕ್ಷಣ ನೀಡುವ ಅಗತ್ಯವನ್ನು ಪ್ರತಿಪಾದಿಸಲಾಗುತ್ತದೆ.

ಲೈಂಗಿಕ ಅಪರಾಧಗಳಿಗೆ ಪ್ರೇರಣೆಯಾಗುವುದರ ಜೊತೆಗೆ ವಂಚನೆಯ ಪ್ರಕರಣಗಳೂ  ಸೈಬರ್ ಲೋಕದಲ್ಲಿ ಹೆಚ್ಚುತ್ತಿವೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ (ಎನ್‌ಸಿಆರ್‌ಬಿ) ಪ್ರಕಾರ, ರಾಷ್ಟ್ರದಲ್ಲಿ 2009ರಲ್ಲಿ 420 ಪ್ರಕರಣಗಳು ಮಾಹಿತಿ ತಂತ್ರಜ್ಞಾನ ಕಾಯಿದೆ ಅನ್ವಯ ದಾಖಲಾಗಿವೆ. ಇವುಗಳಲ್ಲಿ 97 ಪ್ರಕರಣಗಳು ಬೆಂಗಳೂರಿನವು. ಕಂಪ್ಯೂಟರ್‌ನೊಳಗಿನ ಮಾಹಿತಿ ಕದಿಯುವುದು ಅಥವಾ ಖೋಟಾ ಡಿಜಿಟಲ್ ಸಹಿ ಇತ್ಯಾದಿ ವಂಚನೆ ಪ್ರಕರಣಗಳು ಇವು. ಈ ಹಿನ್ನೆಲೆಯಲ್ಲಿ,  ಸೈಬರ್ ಲೋಕದ ಅಪರಾಧಗಳನ್ನು ವಿಶೇಷ ರೀತಿಯಲ್ಲಿ ತೀವ್ರತರವಾಗಿ ಪರಿಗಣಿಸಬೇಕಾದ ತುರ್ತು ಎದುರಾಗಿದೆ.

■ ಸಿ.ಜಿ.ಮಂಜುಳಾ

